

ದೇಹಭಾಷೆ ಅರಿಯುವುದರಿಂದ ಮಕ್ಕಳಲ್ಲಿನ ಸಾಕಷ್ಟು ತಪ್ಪು ತಿಳಿವಳಿಕೆಗಳು ದೂರವಾಗುತ್ತವೆ

ಪೈಕಿ ಮೂವರು ಬಾಲಕಾರ್ಮಿಕರು. ಏಳು ಮಂದಿ ಪುರುಷರು ಮತ್ತು ಐವರು ಮಹಿಳೆಯರು. ಈ ಹೋಟೆಲ್‌ನಲ್ಲಿ ಬಾಲಕಾರ್ಮಿಕರನ್ನು ದುಡಿಸಬಾರದು ಎಂದು ನೋಟಿಸ್ ನೀಡಿದ ಅಧಿಕಾರಿಗಳು, ಮಕ್ಕಳನ್ನು ಅಲ್ಲಿಂದ ಕರೆದೊಯ್ದು ಅಪ್ಪಅಮ್ಮನ ಬಳಿ ಬಿಟ್ಟರು. ಈಗ ಹೋಟೆಲ್‌ನಲ್ಲಿ ಉಳಿದ ಕಾರ್ಮಿಕರ ಸಂಖ್ಯೆ ಎಷ್ಟು?

ಇನ್ನೊಂದು ಉದಾಹರಣೆಯನ್ನು ಗಮನಿಸೋಣ. ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಿಗಳ ಆರೋಗ್ಯ ತಪಾಸಣೆಗೆ ಒಮ್ಮೆ ವೈದ್ಯರ ತಂಡ ಬಂತು. ಅಲ್ಲಿದ್ದ ಉದ್ಯೋಗಿಗಳ ಪೈಕಿ ಐವರು ಮಹಿಳೆಯರಿಗೆ ತಲೆನೋವಿನ ಸಮಸ್ಯೆ ಇರುವುದು ವೈದ್ಯರ ಗಮನಕ್ಕೆ ಬಂತು. ವೈದ್ಯರು ಕಾರಣಗಳನ್ನು ಪರಿಶೀಲಿಸಿದಾಗ, ಆ ಫ್ಯಾಕ್ಟರಿಯಲ್ಲಿ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲ ಎನ್ನುವ ವಿಷಯ ಗೊತ್ತಾಯಿತು. ಶೌಚಾಲಯವಿಲ್ಲ ಎನ್ನುವ ಕಾರಣಕ್ಕಾಗಿ ಮಹಿಳೆಯರು ಸರಿಯಾಗಿ ನೀರನ್ನೇ ಕುಡಿಯುತ್ತಿರಲಿಲ್ಲ. ನೀರು ಸಾಕಷ್ಟು ಪ್ರಮಾಣದಲ್ಲಿ ಕುಡಿಯದ ಮಹಿಳೆಯರಿಗೆ ದೇಹದಲ್ಲಿ ಡಿಹೈಡ್ರೇಷನ್ ಸಮಸ್ಯೆ ಉಂಟಾಗಿತ್ತು. ಹಾಗಾಗಿ ತಲೆನೋವು ಬಂದಿತ್ತು. ವೈದ್ಯರು ಈ ಕುರಿತು ಫ್ಯಾಕ್ಟರಿ ಯಜಮಾನರಿಗೆ ಮಾಹಿತಿ ನೀಡಿ, ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಿ, ಅಲ್ಲಿ ಕಸದ ಬುಟ್ಟಿಯನ್ನು ಇರಿಸುವಂತೆ ಹಾಗೂ ಮಹಿಳೆಯರು ಕೆಲಸ ಮಾಡುವ ಜಾಗದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವಂತೆ ಸೂಚಿಸಿದರು.

ಮೇಲಿನ ಎರಡು ಉದಾಹರಣೆಗಳ ಮೂಲಕ, ಮಕ್ಕಳು ಗಣಿತವನ್ನೂ ಸಮಾಜ ಪಾಠವನ್ನೂ ಕಲಿಯುತ್ತಾರೆ. ಮಹಿಳೆಯರ ಅಗತ್ಯಗಳೇನು ಎಂಬುದು ಹುಡುಗರಿಗೂ ಗೊತ್ತಾಗುತ್ತದೆ. ಶೌಚಾಲಯವಿಲ್ಲದೇ ಇದ್ದರೆ ದೈಹಿಕ ತೊಂದರೆ ಆಗುತ್ತದೆ ಎಂಬ ಅರಿವು ಹುಡುಗಿಯರಿಗೂ ಗೊತ್ತಾಗುತ್ತದೆ. ಪಠ್ಯಪುಸ್ತಕಗಳಲ್ಲಿ ನೈತಿಕ ಪಾಠಗಳು ಇತರ ಪಾಠಗಳ ಜೊತೆಗೆ ಇದೇ ಮಾದರಿಯಲ್ಲಿ ಅಂತರ್ಗತವಾಗಿರಬೇಕು ಎಂಬುದು ವಾಸುದೇವ ಶರ್ಮಾ ಅವರ ಅಭಿಪ್ರಾಯ.

ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಹುಡುಗರ ಜವಾಬ್ದಾರಿಗಳೇನು ಎಂಬ ವಿಚಾರವನ್ನು ಪಠ್ಯದಲ್ಲಿ ಸೇರಿಸುವುದು ಕಷ್ಟವಾಗದು. 'ಅಪ್ಪ ಆಫೀಸಿಗೆ ಹೋಗುತ್ತಾರೆ, ಅಮ್ಮ ಅಡುಗೆ ಮಾಡುತ್ತಾಳೆ' ಎಂಬ ಹೇಳಿಕೆಗಳಿರುವ ಪಾಠಗಳು ಮಕ್ಕಳ ಮನದಲ್ಲಿ ಹೇಗೆ ಒಂದು ನಿರ್ದಿಷ್ಟ ಭಾವವನ್ನು ಮೂಡಿಸುತ್ತದೆಯೋ, 'ಸುಭಾಷನು ಬೆಳಿಗ್ಗೆ ಬೇಗನೇ ಎದ್ದು ಬಾಗಿಲ ಮುಂದೆ ಗುಡಿಸಿ ನೀರು ಚಿಮುಕಿಸಿದನು. ಅವನ ತಂಗಿ ಶಾಶ್ವತಿಯು ಡೈರಿಗೆ ಹಾಲು ಕೊಟ್ಟು ಬಂದಳು' ಎಂಬ ಸಾಲುಗಳು ಉಂಟುಮಾಡುವ ಪರಿಣಾಮ ಬೇರೆಯದೇ. ಕನ್ನಡ, ಹಿಂದಿ, ಇಂಗ್ಲಿಷ್

## ಗಂಡಸರೆಲ್ಲ ಸ್ತ್ರೀಕಂಟಕರಲ್ಲ

ರೇಪ್ ಪ್ರಕರಣಗಳು ಹಿಂದೆಯೂ ಇದ್ದವು ಈಗಲೂ ಇವೆ. ನಾಳೆಯೂ ನಡೆಯುತ್ತದೆ.

ಹಿಂದೆ ರಾತ್ರಿ ಹೊತ್ತಿನಲ್ಲಿ ಅಥವಾ ನಿರ್ಜನ ಪ್ರದೇಶದಲ್ಲಿ ಒಬ್ಬಳೇ ಹೆಣ್ಣುಮಗಳನ್ನು ದೂರ ಕಳಿಸುವುದನ್ನು ಅವಾಯ್ಡ್ ಮಾಡುತ್ತಿದ್ದೆವು. ಆದರೆ ಈಗ ಅದನ್ನು regressive ಅಂತ ಹೇಳುತ್ತಾರೆ. ಕಾಲ ಕೂಡ ಬದಲಾಗಿದೆ. ಹೆಣ್ಣುಮಕ್ಕಳು ಡಿಗ್ರಿ ಪಡೆದು ಎಂತಹ ಕೆಲಸಕ್ಕಾದರೂ ಸೈ ಎನಿಸಿಕೊಂಡಿದ್ದಾರೆ. ಹಾಗಾಗಿ ಹೆಣ್ಣುಮಕ್ಕಳು ಇಂತಹದೇ ಸಮಯ ಎನ್ನದೆ ಓಡಾಡಲೇಬೇಕಾಗಿದೆ.

ಔದ್ಯೋಗೀಕರಣದ ಹಿನ್ನೆಲೆಯಲ್ಲಿ ಏನೇನೋ ಆಸೆಗಳನ್ನು ಇಟ್ಟುಕೊಂಡು ಶಾಲೆ ಬಿಟ್ಟು, ಮನೆ ಬಿಟ್ಟು, ನಗರ ಆಧುನಿಕತೆಗೆ ಬೆರಗಾಗಿಯೋ, ನಗರ ಸೇರಿದ ಸಾವಿರಾರು ಹುಡುಗರನ್ನು ನಾವಿಂದು ಮುಂಬೈ, ಬೆಂಗಳೂರು, ದೆಹಲಿ, ಮುಂತಾದ ಕಡೆ ನೋಡಬಹುದು. ಇವರಲ್ಲಿ ಕೆಲವು ಹುಡುಗರು ಚಟಗಳಿಗೆ ದಾಸರಾಗಿ ಪುಂಡಾಟಿಕೆ ಮಾಡುತ್ತಾ ಕುಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ.

ಎಲ್ಲ ಗಂಡಸರನ್ನೂ ರೇಪಿಸ್ಟ್ ಮನಸ್ಥಿತಿಯವರು ಎಂದು ಚಿತ್ರಿಸಿದರೆ ಎಲ್ಲ ಗಂಡುಮಕ್ಕಳನ್ನೂ ಅಪನಂಬಿಕೆಯಿಂದ ನೋಡುವ ಸ್ಥಿತಿ ಬಂದುಬಿಡುತ್ತದೆ. ಇದು ಯಾವ ಸಮಾಜಕ್ಕೂ ಯಾವ ಕಾಲಕ್ಕೂ ಸರಿಯಲ್ಲ.

**-ಅಶ್ವಿನಿ ದೇಸಾಯಿ**
ಸೆಂಟರ್ ಫಾರ್ ಎಜುಕೇಷನ್ ಆ್ಯಂಡ್ ಸೋಷಿಯಲ್ ಸ್ಟಡೀಸ್